


ಹಾಳೆ. ಅದರಲ್ಲಿ ದೊಡ್ಡದಾಗಿ ಬರೆದ 'ಪೊಯೆಟ್' (ಕವಿ); ಅದರ ಕೆಳಗೆ ಸಣ್ಣ ಅಕ್ಷರಗಳಲ್ಲಿ 'ಫಾರ್ ಹೈರ್' (ಬಾಡಿಗೆಗೆ); ಅದಕ್ಕೂ ಕೆಳಗೆ ಇನ್ನೂ ಸಣ್ಣ ಅಕ್ಷರಗಳಲ್ಲಿ 'ಪೇ ವಾಟ್ ಯೂ ಲೈಕ್' (ನಿಮಗೆ ಇಷ್ಟಬಂದಷ್ಟು ಕೊಡಿ). ಅವನನ್ನು, ಅವನ ಆ ಅಹವಾಲನ್ನು ನೋಡಿದ ಕೂಡಲೇ ನನಗೆ ಇಂಗ್ಲೆಂಡಿನವನೇ ಆದ (ಮಿಡ್ಲ್‌ಸೆಕ್ಸ್‌ನಲ್ಲಿ ಹುಟ್ಟಿದ, ಕೇಂಬ್ರಿಜ್ಜಿನಲ್ಲಿ ವಿದ್ಯಾಭ್ಯಾಸ ಮಾಡಿದ, 'ಅಂಡರ್‌ಸ್ಟ್ಯಾಂಡಿಂಗ್ ಪೊಯೆಟ್ರಿ' ಎಂಬ ಪುಸ್ತಕ ಬರೆದ) ಜೇಮ್ಸ್ ರೀವ್ಸ್‌ನ ಒಂದು ಕವನ ನೆನಪಾಯಿತು. 'ಸ್ಪೈಸರ್ಸ್ ಇನ್‌ಸ್ಟ್ಯಾಂಟ್ ಪೊಯೆಟ್ರಿ' ಎಂಬ ಶೀರ್ಷಿಕೆಯ ಆ ಕವನವನ್ನು ನಮ್ಮ ಕವಿ ರಾಮಚಂದ್ರ ಶರ್ಮರು 'ಭಟ್ಟರ ತತ್‌ಕ್ಷಣದ ಕಾವ್ಯದ ಪುಡಿ' ಎಂದು ಅನುವಾದಿಸಿದ್ದಾರೆ. ಅನುವಾದಿಸಿದ್ದಾರೆ ಎನ್ನುವುದಕ್ಕಿಂತ ಅನುಸರಿಸಿದ್ದಾರೆ ಎನ್ನಬಹುದೇನೊ (ನೋಡಿ: 'ಈ ಶತಮಾನದ ನೂರು ಇಂಗ್ಲಿಷ್ ಕವನಗಳು')

**ಸುತರಾಂ ಆತಂಕ ಬೇಡ, ಎಲ್ಲಂದರಲ್ಲಿ**
**ಸಿಗುವಂಥ ಮಾಲು ಭಟ್ಟರ ತ.ಕಾ. ಪುಡಿ;**
**ತತ್‌ಕ್ಷಣದ ಕಾವ್ಯಕ್ಕೆ ನಾಡಿನಾದ್ಯಂತ ಹೆಸರಾದದ್ದು,**
**ಸಾಹಿತ್ಯ ಅಕ್ಯಾಡೆಮಿಯ ಪ್ರಶಸ್ತಿ ಪಡೆದವರ ಮೇಲ್ಪಂಕ್ತಿ**
**ಹಿಡಿದು ಮಾಡಿದ ಪುಡಿ. ಧೂಳು ಹೊಡೆದ**
**ಹಳೆಗನ್ನಡದ**
**ಶಬ್ದಕ್ಕೆ ಧ್ವನ್ಯರ್ಥ ಬರುವಂತೆ ಅಡ್ಡಗೋಡೆಯ ಮೇಲೆ**
**ಬಿಸಿಲು ಗಾಳಿಗೆ ಒಡ್ಡಿ, ಸಂಕೇತ ಪ್ರತಿಮೆಗಳ ಜೊತೆಗೆ**
**ಏಳೇಳು ಥರದ ಕ್ಲಿಷ್ಟತೆ ಕಲಸಿ**
**ಸಿದ್ಧ ಪ್ರಸಿದ್ಧ ಕವಿಗಳೇ ಕುಟ್ಟಿ ತಯಾರಿಸಿದ ಪುಡಿ.**
**ಸ್ಯಾಂಪಲ್ ಸೈಜಿಗೈದು ರೂಪಾಯಿ, ಮಹಾಕಾವ್ಯಕ್ಕೆ**
**ಸಾಕಾಗುವಷ್ಟಕ್ಕೆ ಐದು ನೂರು.**